## ಕರ್ನಾಟಕ ಸರ್ಕಾರ
## ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/05/ಇಜಿಯು/2017

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ :10-07-2017

### <u>ಅಧಿಕೃತ ಜ್ಞಾಪನ</u>

ವಿಷಯ: ತರಬೇತಿ ಪಡೆದಂತಹ ಸಂಸ್ಥೆಗಳು ನಿರ್ದೇಶನಾಲಯದೊಂದಿಗೆ ಪತ್ರ ವ್ಯವಹಾರವನ್ನು LMS/FMS ತಂತ್ರಾಂಶದ Live Site ಮೂಲಕ ಮಾಡುವುದರ ಬಗ್ಗೆ.

- - - - - -

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ದಿ.29-05-2017ರಂದು LMS/FMS ತಂತ್ರಾಂಶವನ್ನು ಪ್ರಯೋಗಾತ್ಮಕವಾಗಿ ಕೆಲವೊಂದು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿಯೂ ಅನುಷ್ಠಾನಗೊಳಿಸುವ ಸಂಬಂಧ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ LMS/FMS ತಂತ್ರಾಂಶದ ಬಗ್ಗೆ ಹಾಗೂ ಅದನ್ನು ಬಳಸಿ ಪತ್ರಗಳನ್ನು ವಿಲೇ ಮಾಡುವುದರ ಬಗ್ಗೆ ತಿಳಿಸಿಕೊಡಲಾಗಿರುತ್ತದೆ. ಹಾಗೆಯೇ, ಪತ್ರ ವ್ಯವಹಾರವನ್ನು ಪ್ರಾಯೋಗಿಕವಾಗಿ LMS/FMS ತಂತ್ರಾಂಶದ **Training Site** ನಲ್ಲಿ ಮಾಡಲು ತಿಳಿಸಲಾಗಿತ್ತು.

ದಿ.17/07/2017 ರಿಂದ ಈ ಸಂಸ್ಥೆಗಳು ನಿರ್ದೇಶನಾಲಯದೊಂದಿಗೆ ನಡೆಸುವ ಪತ್ರ ವ್ಯವಹಾರವನ್ನು ಸೇರಿದಂತೆ ಎಲ್ಲ ಕಡತಗಳ/ಪತ್ರಗಳ ವಿಲೇವಾರಿಯನ್ನು LMS/FMS ತಂತ್ರಾಂಶದ **Live Site** ಅಂದರೆ **164.100.133.129:81/lpohe** ಇದರ ಮುಖಾಂತರವೇ ನಡೆಸಬೇಕು ಎಂದು ಆದೇಶಿಸಿದೆ. ಅಲ್ಲದೇ LMS/FMS ತಂತ್ರಾಂಶದ ಮುಖಾಂತರ ಕಳುಹಿಸದ ಪತ್ರಗಳನ್ನು ಮಾನ್ಯ ಮಾಡಲಾಗುವುದಿಲ್ಲ ಎಂದು ತಿಳಿಸಿದೆ. Training siteಗೆ ನೀಡಿಲಾಗಿದ್ದ Default User-ID ಮತ್ತು Password ಗಳನ್ನೇ Live siteಗೂ ಉಪಯೋಗಿಸುವಂತೆ ಸೂಚಿಸಿದೆ.

LMS/FMS ತಂತ್ರಾಂಶದ ಬಗ್ಗೆ ಯಾವುದೇ ಮಾಹಿತಿ ಪಡೆಯಬೇಕೆಂದರೆ <u>dtelmsfms@gmail.com</u>ಗೆ ಇ-ಮೇಲ್ ಮೂಲಕ ವ್ಯವಹರಿಸಬಹುದು ಎಂಬುದಾಗಿ ತಿಳಿಸಿದೆ.

ನಿರ್ದೇಶಕರು

ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಅನುಷ್ಠಾನಕ್ಕಾಗಿ:

1. ಪ್ರಾಂಶುಪಾಲರು, SKSJTI/SKSJTI Evening College, Bengaluru
2. ಪ್ರಾಂಶುಪಾಲರು, SJP/SJP Evening/ITT/IPT/WPT/GRICP/SRCIBM, Bengaluru.
3. ಪ್ರಾಂಶುಪಾಲರು, Govt. Polytechnic, Immadihalli
4. ಪ್ರಾಂಶುಪಾಲರು, Govt. Polytechnic, Channasandra
5. ಪ್ರಾಂಶುಪಾಲರು, Govt. Film and TV Technical Inst,Hesaraghatta